

ಸೂಕ್ತಕಾಲ ಎಂದು ನಿರ್ಧರಿಸಿದ್ದರು.

ಆ ಸುದ್ದಿಯು ಮಹಾದೇವರ ಕಿವಿಗಳಿಗೆ ತಲುಪಿತ್ತು. ಜಾತಿ ಮನಸ್ಸಿನ ಅವರ ಗುಂಡಿಗೆಯ ರಕ್ತ ಕುದಿಯತೊಡಗಿತ್ತು. ಅವರಿಬ್ಬರೂ ಒಟ್ಟಾಗಿ ಇರುವಾಗಲೇ ಅಪಹರಣ ಮಾಡಿಸಿದ ಮಹಾದೇವರು, ಅವರ ತೋಟದಲ್ಲಿ ಅಣ್ಣ ರಾಮಚಂದ್ರರ ಎದುರಲ್ಲೇ ಅವರಿಬ್ಬರನ್ನು ಕೊಂದು ಹೂತು ಹಾಕಿದರು!.

ಮಮತಾ ಕಾಣೆಯಾದ ವಿಷಯಕ್ಕೆ ಸಂಬಂಧಿಸಿದಂತೆ ರಾಮಚಂದ್ರ ನಾಮ್‌ಕಾವಸ್ತೆಗೆ ಕಾಲೇಜು, ಪಬ್ಬು, ಕ್ಲಬ್ಬು, ಸಂಬಂಧಿಕರ ಮನೆಗಳಲ್ಲಿ ಹುಡುಕಿಸಿದರು ಮತ್ತು ಪೊಲೀಸ್ ಕಂಪ್ಲೇಂಟನ್ನೂ ಕೊಟ್ಟಿದ್ದರು.

ಆ ಎಲೆಕ್ಷನ್‌ನಲ್ಲಿ ಮಹಾದೇವ ಮತ್ತೆ ಅದ್ದೂರಿಯಾಗಿ ಜಯಶೀಲರಾದರು. ಅದಾದ ಒಂದು ವಾರದ ನಂತರ ಮಹಾದೇವರು ನಿರೀಕ್ಷಿಸದ ನಡೆದ ವಿಚಿತ್ರ ತಿರುವಿನ ಘಟನೆಯೊಂದು ಮಹಾದೇವರ ಆತ್ಮಹತ್ಯೆಗೆ ಕಾರಣವಾಯಿತು!

ಅಂದು ಎಂದಿನಂತೆ ಬೆಳಗ್ಗೆ ಟಿವಿಯಲ್ಲಿ ನ್ಯೂಸ್ ಚಾನೆಲ್‌ಗಳನ್ನು ನೋಡುತ್ತಾ ಕುಳಿತಿದ್ದ ಮಹಾದೇವರ ಕಣ್ಣಿಗೆ, ನ್ಯೂಸ್ ಚಾನೆಲೊಂದರಲ್ಲಿ ಕಾಣಿಸಿಕೊಂಡ ಶಾಂತಪ್ಪನವರು, ಮಮತಾ ಮತ್ತು ದಿವಾಕರನ್ನು ರಾಮಚಂದ್ರರ ತೋಟದಲ್ಲಿ ಮಹಾದೇವರು ಕೊಂದ ಕೊಲೆಯ ಘಟನೆಯನ್ನು ವಿವರಿಸುತ್ತ, ಕೊಲೆ ನಡೆದ ಸ್ಥಳವನ್ನು, ಹೂತು ಹಾಕಿದ ಜಾಗವನ್ನು ಪೊಲೀಸರಿಗೆ ತೋರಿಸುತ್ತಿದ್ದ ದೃಶ್ಯ ಬರುತ್ತಿತ್ತು!! ಮತ್ತು ಸಾಕ್ಷಿಗಾಗಿ ಪೊಲೀಸರು ಅತ್ತಇತ್ತ ದಡಬಡ ಓಡಾಡುತ್ತಿರುವ ಪೊಲೀಸರನ್ನು ತೋರುತ್ತ ಟಿವಿ ಆ್ಯಂಕರ್ ವಿವರಿಸುತ್ತಿದ್ದಳು ಹಾಗೂ ಹಾರೆ, ಗುದ್ದಲಿ ಹಿಡಿದು ಹೂತ ಹೆಣಗಳನ್ನು ತೆಗೆಯಲು ತಯಾರಿ ನಡೆಸುತ್ತಿದ್ದರು.

ಮಹಾದೇವ ಭಯಭೀತಗೊಂಡಿದ್ದರು. 'ಇದು ಹೇಗೆ ಸಾಧ್ಯ?!' ಎಂಬುದು ಅವರಿಗೆ ಬಿಡಿಸಲಾರದ ಕಗ್ಗಂಟಾಗಿತ್ತು. ಆ ದಿನ ನಡೆದ ಸಂಗತಿ ಏನೆಂದರೆ, ಮಮತಾ ಮತ್ತು ದಿವಾಕರರನ್ನು ತೋಟದಲ್ಲಿ ಮಹಾದೇವ ಕೊಂದು ಹೂತು ಹಾಕಿದ ದೃಶ್ಯವನ್ನು ಪಕ್ಕದ ತೋಟದ ಮಾಲೀಕರಾದ ಶಾಂತಪ್ಪನವರು ದೂರದಿಂದ ನೋಡಿ ಗಾಬರಿಯಾಗಿ ಯಾರಿಗೂ ಅರಿವಾಗದಂತೆ ಓಡಿ ಹೋಗಿದ್ದರು!. ಅಂದು ಅವರು, ರಾಮಚಂದ್ರರವರ ತೋಟದ ಆಳು ಕೇಶವನನ್ನು ಕಾಣಲೆಂದು ಬರುತ್ತಿದ್ದವರು, ದೂರದಿಂದ ಆ ಕೊಲೆಯ ದೃಶ್ಯವನ್ನು ನೋಡಿ ಓಡಿ ಹೋಗಿದ್ದರು. ಆ ಸಂಗತಿಯು ಮಹಾದೇವರವರಿಗೆ ತಿಳಿದಿರಲಿಲ್ಲ. ಅದಷ್ಟೇ ಅಲ್ಲದೆ, ಶಾಂತಪ್ಪನವರು ಮಹಾದೇವರವರ ವಿರೋಧ ಪಕ್ಷದ ಹೆಸರಾಂತ ರಾಜಕೀಯ ಮುಖಂಡರಾಗಿದ್ದರು.

ಶಾಸಕ ಮಹಾದೇವರ ಮೇಲೆ ಕೊಲೆಯ ಅಪಾದನೆಯ ನ್ಯೂಸ್ ಬಿತ್ತರವಾಗತೊಡಗಿದಂತೆ, ಒಂದೇ ಸಮನೆ ಮಹಾದೇವರ ಫೋನ್ ರಿಂಗಣಿಸತೊಡಗಿತ್ತು. ಅವರು ಯಾರ ಫೋನ್ ಕಾಲ್‌ಗಳನ್ನು ರಿಸೀವ್ ಮಾಡಲಿಲ್ಲ. ಅವರಿಗೆ ಬಂದ ಕರೆಗಳಲ್ಲಿ ಅರ್ಧದಷ್ಟು ಕರೆಗಳು ನ್ಯೂಸ್ ಚಾನೆಲ್‌ಗಳಾಗಿದ್ದವು. ಮತ್ತರ್ಧ ಕರೆಗಳು ಅವರ ರಾಜಕೀಯ ಪಕ್ಷದ ಮುಖಂಡರು ಮತ್ತು ಅವರ ಕುಟುಂಬದವರ ಕರೆಗಳಾಗಿದ್ದವು. ಮಹಾದೇವರೊಳಗೆ ಯಾರಿಗೆ ಏನು ಉತ್ತರಿಸಬೇಕು ಎಂಬ ಉತ್ತರ ಸತ್ತು ಹೋಗಿತ್ತು!. ನಂತರ ರಿವಾಲ್ವರ್‌ಗೆ ಗುಂಡು ತುಂಬಿಕೊಂಡ ಮಹಾದೇವರು, ತಮ್ಮ ತಲೆಗೆ ಗುಂಡಿಕ್ಕಿಕೊಂಡರು.

ಮಹಾದೇವರ ಆತ್ಮಹತ್ಯೆಯಾದ ಹದಿನೈದು ನಿಮಿಷದ ನಂತರ, ಮಹಾದೇವರ ಮನೆಯ ಮುಂದೆ ಕಿಕ್ಕಿರಿದು ಜನ ಸೇರಿದರು. ಬರೀ ಜನರಷ್ಟೇ ಅಲ್ಲದೇ, ಟಿವಿ ಮತ್ತು ದಿನಪತ್ರಿಕೆಯ ಪತ್ರಕರ್ತರು, ರಾಜಕಾರಣಿಗಳು, ಪೊಲೀಸರು, ಆಂಬುಲೆನ್ಸ್‌ಗಳು, ಸರ್ಕಾರಿ ಅಧಿಕಾರಿಗಳ ದಂಡು ನೆರೆದಿತ್ತು.

ಆ ಘಟನೆ ನಡೆದ ಇಪ್ಪತ್ತೈದು ನಿಮಿಷದ ನಂತರ 'ತಾಲ್ಲೂಕಿನ ಹಾಲಿ ಶಾಸಕ ಮಹಾದೇವರು ಗುಂಡಿಕ್ಕಿಕೊಂಡು ಆತ್ಮಹತ್ಯೆ' ಎಂಬ ಹೊಸ ಸುದ್ದಿಯು, ರಾಜ್ಯದ ಟಿವಿ ನ್ಯೂಸ್‌ಗಳ ಬ್ರೇಕಿಂಗ್ ನ್ಯೂಸ್ ಪಟ್ಟಿಗೆ ಸೇರಿತು. ●